# ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು ಇವರ ನಡವಳಿಗಳು

ವಿಷಯ: ತುಮಕೂರು ತಾಲ್ಲೂಕು ಅಮಲಾಪುರ ಗ್ರಾಮ ಸರ್ವೆ ನಂಬರ್ 31ರಲ್ಲಿ 10-00ಎಕರೆ ಜಮೀನು ಘನತ್ಯಾಜ್ಯ ವಸ್ತು ವಿಲೇವಾರಿ ಗಾಗಿ ಮಂಜೂರಾಗಿರುವ ಜಮೀನು ರದ್ದುಗೊಳಿಸಿ ಕೇಂದ್ರೀಯ ವಿದ್ಯಾಲಯ ನಿರ್ಮಿಸಲು ಮಂಜೂರಾತಿ ನೀಡುವ ಕುರಿತು.

ಉಲ್ಲೇಖ:
1) ಜಿಲ್ಲಾಧಿಕಾರಿಗಳು, ತುಮಕೂರು ರವರ ಆದೇಶ ಸಂಖ್ಯೆ: ಎಲ್.ಎನ್.ಡಿ(ಟಿಎಂಕೆ) ಸಿ.ಆರ್ 2/96-97, ದಿ: 19.11.1996.
2) ಪೌರಾಯುಕ್ತರು, ನಗರಸಭೆ, ತುಮಕೂರು ರವರ ಕಛೇರಿ ಪತ್ರಸಂಖ್ಯೆ: ನಸತು: 1555/05-06, ದಿನಾಂಕ: 18.11.2005.
3) ಮಾನ್ಯ ಶ್ರೀ ಮಲ್ಲಿಕಾರ್ಜುನಯ್ಯ ರವರು, ಲೋಕಸಭಾ ಸದಸ್ಯರು ರವರ ಪತ್ರ ದಿನಾಂಕ: 28.09.2005.

* * *

**ಪ್ರಸ್ತಾವನೆ:**

ತುಮಕೂರು ನಗರಸಭೆಗೆ ಘನತ್ಯಾಜ್ಯ ವಸ್ತುಗಳ ವಿಲೇವಾರಿಗಾಗಿ ಅಮಲಾಪುರ ಗ್ರಾಮ ಸರ್ವೆ ನಂಬರ್ 31ರಲ್ಲಿ 10-00ಎಕರೆ ಸರ್ಕಾರಿ ಜಮೀನನ್ನು ನಗರಸಭೆಗೆ ಉಲ್ಲೇಖ(1)ರ ಆದೇಶದಂತೆ ಮಂಜೂರು ಮಾಡಲಾಗಿತ್ತು. ನಗರಸಭೆಯು ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮದ ವತಿಯಿಂದ ಏಷ್ಯನ್ ಅಭಿವೃದ್ಧಿ ಬ್ಯಾಂಕ್‌ನಿಂದ ಸಾಲ ಪಡೆದು ರೂ. 27.80ಲಕ್ಷ ಅಂದಾಜಿನಲ್ಲಿ ಸದರಿ ಪ್ರದೇಶವನ್ನು ಅಭಿವೃದ್ಧಿ ಪಡಿಸಿ, ಘನತ್ಯಾಜ್ಯ ವಸ್ತುವಿಲೇವಾರಿಗೆ ಉಪಯೋಗಿಸಿಕೊಳ್ಳಲು ನಗರಸಭೆ 1999ನೇ ಸಾಲಿನಲ್ಲಿ ಪೂರ್ಣಗೊಳಿಸಲಾಗಿದೆ.

ನಗರಸಭೆ ಸದರಿ ಸ್ಥಳದಲ್ಲಿ ನಗರದಲ್ಲಿ ಉತ್ಪನ್ನವಾಗುವ ಘನತ್ಯಾಜ್ಯ ವಸ್ತುಗಳನ್ನು ಶೇಖರಿಸಲು ಪ್ರಾರಂಭಿಸಿದಾಗ ಅರಕೆರೆ ಗ್ರಾಮ ಪಂಚಾಯಿತಿ ಮತ್ತು ಅಮಲಾಪುರ ಗ್ರಾಮಸ್ಥರಿಂದ ತೀವ್ರ ಪ್ರತಿಭಟನೆ ವ್ಯಕ್ತವಾದ ಹಿನ್ನಲೆಯಲ್ಲಿ ಸದರಿ ಪ್ರದೇಶವನ್ನು ಇಂದಿನವರೆಗೂ ಘನತ್ಯಾಜ್ಯ ವಸ್ತುಗಳ ಶೇಖರಣೆಗಾಗಿ ಉಪಯೋಗಿಸಲು ಸಾಧ್ಯವಾಗಿಲ್ಲವೆಂದೂ ಹಾಗೂ ಕಳೆದ 5 ವರ್ಷಗಳಿಂದ ಅನೇಕ ಬಾರಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಅರಕೆರೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಭೆ ನಡೆಸಿ ಸಾರ್ವಜನಿಕರ ಮನವೊಲಿಸಲು ಪ್ರಯತ್ನಿಸಲಾಗಿದ್ದರೂ ಯಶಸ್ವಿಯಾಗಿಲ್ಲವೆಂದು ಪೌರಾಯುಕ್ತರು ತಮ್ಮ ಉಲ್ಲೇಖ ಪತ್ರದಲ್ಲಿ ತಿಳಿಸಿದ್ದಾರೆ.

ಆದ್ದರಿಂದ ಪ್ರಸ್ತುತ ನಗರಸಭೆ ಅಜ್ಜಗೊಂಡನಹಳ್ಳಿ ಗ್ರಾಮದ ಸರ್ವೆ ನಂಬರ್‌ಗಳನ್ನು ಆಯ್ಕೆ ಮಾಡಿ 45-00ಎಕರೆ ಪ್ರದೇಶವನ್ನು ಘನತ್ಯಾಜ್ಯ ವಸ್ತುಗಳ ಶೇಖರಣೆ ಮತ್ತು ಸಂಸ್ಕರಣಾ ಘಟಕ ಸ್ಥಾಪಿಸಲು ಕ್ರಮತೆಗೆದುಕೊಂಡಿದ್ದು, ಸದರಿ ಪ್ರದೇಶವನ್ನು ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು

ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಘನತ್ಯಾಜ್ಯ ವಸ್ತುವಿಲೇವಾರಿಗೆ ಸೂಕ್ತವಾದ ಜಾಗವೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದರಿಂದ ಅಜ್ಜಗೊಂಡನಹಳ್ಳಿ ಗ್ರಾಮದ ಸರ್ವೆ ನಂಬರ್ ಜಮೀನುಗಳನ್ನು ಭೂ-ಸ್ವಾಧೀನ ಕಾಯ್ದೆಯಡಿ ಸ್ವಾಧೀನ ಪಡಿಸಿಕೊಳ್ಳಲು ಕೋರಿದ್ದರ ಮೇರೆಗೆ ಭೂ-ಸ್ವಾಧೀನ ಪಡಿಸಿಕೊಳ್ಳಲು ಪ್ರತ್ಯೇಕ ಕ್ರಮ ಜರುಗಿಸಲಾಗಿದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಅಮಲಾಪುರ ಗ್ರಾಮದ ಸರ್ವೆ ನಂ 31ರಲ್ಲಿ ಉಲ್ಲೇಖ(1)ರ ಆದೇಶದಂತೆ ನಗರಸಭೆಗೆ ಮಂಜೂರು ಮಾಡಲಾಗಿರುವ 10-00ಎಕರೆ ಜಾಗವನ್ನು ಕೇಂದ್ರೀಯ ವಿದ್ಯಾಲಯಕ್ಕೆ ಮರುಮಂಜೂರಾತಿ ಮಾಡಿಕೊಡಲು ನಗರಸಭೆಯ ಅಭ್ಯಂತರವಿಲ್ಲವೆಂದು ಪೌರಾಯುಕ್ತರು ಉಲ್ಲೇಖ (2)ರ ಪತ್ರದಲ್ಲಿ ತಿಳಿಸಿದ್ದಾರೆ.

ಪ್ರಾಂಶುಪಾಲರು, ಕೇಂದ್ರೀಯ ವಿದ್ಯಾಲಯ, ತುಮಕೂರು ಇವರು ಸುಸಜ್ಜಿತವಾದ ಶಾಲಾ ಕಟ್ಟಡ ಮತ್ತು ಸಿಬ್ಬಂದಿಗಳ ವಸತಿ ಗೃಹ, ಕ್ರೀಡಾ ವಸತಿ ನಿಲಯ ಹಾಗೂ ಆಟದ ಮೈದಾನ ನಿರ್ಮಿಸಲು 25-00ಎಕರೆ ಜಮೀನು ಅಮಲಾಪುರ ಗ್ರಾಮ ಸರ್ವೆ ನಂಬರ್ 31ರಲ್ಲಿ ಲಭ್ಯವಿರುವುದರಿಂದ ಮತ್ತು ಸದರಿ ಜಾಗವು ಕೇಂದ್ರೀಯ ವಿದ್ಯಾಲಯ ನಿರ್ಮಿಸಲು ಸೂಕ್ತ ಪ್ರದೇಶವಾಗಿರುವುದರಿಂದ ಸದರಿ ಜಾಗವನ್ನು ಮಂಜೂರು ಮಾಡುವಂತೆ ಕೋರಿದ್ದಾರೆ. ಮಾನ್ಯ ಲೋಕಸಭಾ ಸದಸ್ಯರು, ತುಮಕೂರು ಇವರು ಕೇಂದ್ರೀಯ ವಿದ್ಯಾಲಯ ನಿರ್ಮಿಸಲು ಅಮಲಾಪುರ ಗ್ರಾಮದ ಸರ್ವೆ ನಂಬರ್ 31ರಲ್ಲಿ 25-00ಎಕರೆ ಜಮೀನನ್ನು ಮಂಜೂರು ಮಾಡುವಂತೆ ಕೋರಿ ದಿನಾಂಕ: 28.09.2005 ಮತ್ತು 14.10.2005ರಲ್ಲಿ ಪತ್ರ ಬರೆದಿದ್ದಾರೆ. ಆದ್ದರಿಂದ ಈ ಆದೇಶ

**ಆದೇಶ ಸಂಖ್ಯೆ: ಎಲ್.ಎನ್.ಡಿ: ಸಿ.ಎಂ.ಕೆ: ಸಿ.ಆರ್: 153(1)/93-94, ದಿ: 14 /12/2005**

ಕರ್ನಾಟಕ ಪುರಸಭಾ ಕಾಯ್ದೆ 64ರ ಕಲಂ 72(2)ರ ಪ್ರಕಾರ ಮತ್ತು ಸರ್ಕಾರದ ಆದೇಶ ಸಂಖ್ಯೆ:ನಆಇ:129:ಟಿಎಂಡಿ:2002 ಬೆಂಗಳೂರು, ದಿ:02.06.2003ರಲ್ಲಿ ಅಧಿಸೂಚನೆ ಸಂಖ್ಯೆ:ಯುಡಿಡಿ: 114:ಟಿಎಂಎಸ್.2003 ಬೆಂಗಳೂರು, ದಿನಾಂಕ: 15.10.2003 ರಂತೆ ಜಿಲ್ಲಾಧಿಕಾರಿಗಳಿಗೆ ದತ್ತವಾದ ಅಧಿಕಾರದಂತೆ ಅಮಲಾಪುರ ಗ್ರಾಮ ಸರ್ವೆ ನಂಬರ್ 31ರಲ್ಲಿಯ 10-00 ಎಕರೆ ಜಮೀನನ್ನು ಆದೇಶ ಸಂಖ್ಯೆ:ಎಲ್.ಎನ್.ಡಿ(ಟಿಎಂಕೆ)ಸಿ.ಆರ್.2/96-97, ದಿ:19.11.1996ರ ರೀತ್ಯ ನಗರಸಭೆಗೆ ಮಂಜೂರು ಮಾಡಿದ್ದು ಈ ಭೂಮಿಯನ್ನು ನಗರಸಭೆಯಿಂದ ಪ್ರಾಂಶುಪಾಲರು, ಕೇಂದ್ರೀಯ ವಿದ್ಯಾಲಯ, ತುಮಕೂರು ಇವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ವರ್ಗಾಯಿಸಲು ಮಂಜೂರಾತಿ ನೀಡಿದೆ. ಮಂಜೂರಾತಿ ಮಾಡಿದ ಜಮೀನಿನ ಚಕ್‌ಬಂದಿ ವಿವರ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಸರ್ವೆ ನಂ.31ರ ಉಳಿಕೆ ಪ್ರದೇಶ, ಉತ್ತರಕ್ಕೆ ಸರ್ವೆ ನಂ.31ರ ಉಳಿಕೆ ಪ್ರದೇಶ, ದಕ್ಷಿಣಕ್ಕೆ ಸರ್ವೆ ನಂ.31ರ

ಉಳಿಕೆ ಪ್ರದೇಶ, ಇರುವ ಜಾಗ ಈ ಪ್ರದೇಶವನ್ನು ಪೌರಾಯುಕ್ತರು, ನಗರಸಭೆ, ತುಮಕೂರು ರವರು ಕೇಂದ್ರೀಯ ವಿದ್ಯಾಲಯಕ್ಕೆ ಹಸ್ತಾಂತರಿಸತಕ್ಕದ್ದು.

**ಷರತ್ತುಗಳು:**

1. ಪ್ರಾಂಶುಪಾಲರು ಕೇಂದ್ರಿಯ ವಿದ್ಯಾಲಯ, ತುಮಕೂರು ಇವರಿಗೆ ಸುಸಜ್ಜಿತವಾದ ಶಾಲಾ ಕಟ್ಟಡ ಮತ್ತು ಸಿಬ್ಬಂದಿಗಳ ವಸತಿ ಗೃಹ, ಕ್ರೀಡಾ ವಸತಿ ನಿಲಯ ಹಾಗೂ ಆಟದ ಮೈದಾನ ನಿರ್ಮಿಸಲು ಮಂಜೂರಾತಿ ನೀಡಿದೆ.

2. ನಿವೇಶನವನ್ನು ಯಾವ ಉದ್ದೇಶಕ್ಕಾಗಿ ನೀಡಿದೆಯೋ ಅದೇ ಉದ್ದೇಶಕ್ಕಾಗಿ ಬಳಸಿಕೊಳ್ಳಬೇಕು.

3. ಎರಡು ವರ್ಷದ ಒಳಗಾಗಿ ಶಾಲಾ ಕಟ್ಟಡವನ್ನು ನಿರ್ಮಿಸಬೇಕು.

4. ಮಂಜೂರು ಮಾಡಿರುವ ನಿವೇಶನವನ್ನು ಬೇರೆಯವರಿಗೆ ಪರಭಾರೆ ಮಾಡಬಾರದು ಮತ್ತು ಬೇರೆ ಉದ್ದೇಶಕ್ಕೆ ಉಪಯೋಗಿಸಬಾರದು.

5. ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಮಂಜೂರಾತಿ ನೀಡಿದ ಆದೇಶವನ್ನು ರದ್ದುಗೊಳಿಸುವ ಅಧಿಕಾರ ಜಿಲ್ಲಾಧಿಕಾರಿಗಳು, ತುಮಕೂರು ರವರು ಕಾಯ್ದಿರಿಸಿಕೊಂಡಿರುತ್ತಾರೆ.

ಜಿಲ್ಲಾಧಿಕಾರಿಗಳು,
ತುಮಕೂರು ಜಿಲ್ಲೆ,
ತುಮಕೂರು.

ಪ್ರತಿಯನ್ನು

1. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರಿಗೆ ಮಾಹಿತಿಗಾಗಿ.
2. ಉಪವಿಭಾಗಾಧಿಕಾರಿಗಳು, ತುಮಕೂರು ಉಪವಿಭಾಗ, ತುಮಕೂರು ರವರಿಗೆ ಮಾಹಿತಿಗಾಗಿ
3. ಮಾನ್ಯ ಶ್ರೀ ಎಸ್. ಮಲ್ಲಿಕಾರ್ಜುನಯ್ಯ ರವರು ಲೋಕಸಭಾ ಸದಸ್ಯರು, ತುಮಕೂರು ರವರಿಗೆ ಮಾಹಿತಿಗಾಗಿ
4. ಮಾನ್ಯ ಶ್ರೀ ಎಸ್. ಶಿವಣ್ಣ ರವರು, ವಿಧಾನಸಭಾ ಸದಸ್ಯರು, ತುಮಕೂರು ರವರಿಗೆ ಮಾಹಿತಿಗಾಗಿ.
5. ತಹಶೀಲ್ದಾರ್, ತುಮಕೂರು ತಾಲ್ಲೂಕು, ತುಮಕೂರು ರವರಿಗೆ ಸೂಕ್ತ ಕ್ರಮಕ್ಕಾಗಿ.
6. ಪೌರಾಯುಕ್ತರು, ನಗರಸಭೆ, ತುಮಕೂರು ರವರಿಗೆ ಮಾಹಿತಿಗಾಗಿ.
7. ಪ್ರಾಂಶುಪಾಲರು ಕೇಂದ್ರಿಯ ವಿದ್ಯಾಲಯ, ತುಮಕೂರು ರವರಿಗೆ

ಜಿಲ್ಲಾಧಿಕಾರಿಗಳು,
ತುಮಕೂರು ಜಿಲ್ಲೆ,
ತುಮಕೂರು.

ಜಿಲ್ಲಾಧಿಕಾರಿಗಳು,
ತುಮಕೂರು ಜಿಲ್ಲೆ,
ತುಮಕೂರು.

# ನಗರಸಭಾ ಕಾರ್ಯಾಲಯ, ತುಮಕೂರು.

ನಂ.ನಸತು:ಭೂಸ್ವಾಧೀನ:ಸಿಆರ್/01/2005-06 ದಿನಾಂಕ 24-03-2006.

## -: ಸ್ವಾಧೀನ ಪತ್ರ :-

ತುಮಕೂರು ತಾಲ್ಲೂಕು ಕಸಬಾ ಅಮಲಾಪುರ ಗ್ರಾಮ ಸರ್ವೆ ನಂಬರ್ 31 ರಲ್ಲಿ 10-00 ಎಕರೆ ಜಮೀನು ಘನತ್ಯಾಜ್ಯ ವಸ್ತು ವಿಲೇವಾರಿಗಾಗಿ ಈ ಹಿಂದೆ ನಗರಸಭೆಗೆ ಮಂಜೂರಾಗಿರುವ ಜಮೀನು ರದ್ದುಗೊಳಿಸಿ ಕೇಂದ್ರೀಯ ವಿದ್ಯಾಲಯ ನಿರ್ಮಿಸಲು ಮಂಜೂರಾತಿ ನೀಡಿ ಆದೇಶ ಸಂಖ್ಯೆ:ಎಲ್.ಎನ್.ಡಿ./ಸಿಎಂಕೆ/ಸಿಆರ್ 153(1)93-94 ದಿನಾಂಕ 14-12-2005 ರಂತೆ ಮಾನ್ಯ ಜಿಲ್ಲಾಧಿಕಾರಿಗಳು ತುಮಕೂರು ಜಿಲ್ಲೆ, ತುಮಕೂರು ರವರು ಆದೇಶ ಮಾಡಿರುತ್ತಾರೆ.

ಮೇಲ್ಕಂಡ ಆದೇಶದಂತೆ ದಿನಾಂಕ 4-1-2006ನೇ ಬುಧವಾರದಂದು ನಡೆದ ಕೌನ್ಸಿಲ್ ತುರ್ತು ಸಭೆಯಲ್ಲಿ ಘನತ್ಯಾಜ್ಯ ವಸ್ತು ವಿಲೇವಾರಿಗಾಗಿ ಆಯ್ಕೆಗೊಂಡಿರುವ ಅಜ್ಜಗೊಂಡನಹಳ್ಳಿ ಗ್ರಾಮದ ಸರ್ವೆ ನಂಬರ್‌ಗಳ ಜಮೀನು ಹಸ್ತಾಂತರ ಮಾಡುವವರೆಗೆ ಹಾಗೂ ಅಮಲಾಪುರ ಗ್ರಾಮ ಸರ್ವೆ ನಂಬರ್ 31 ರಲ್ಲಿ ಈಗಾಗಲೇ ಘನತ್ಯಾಜ್ಯ ವಸ್ತು ವಿಲೇವಾರಿಗಾಗಿ ಅಭಿವೃದ್ಧಿಪಡಿಸಲು ಎಡಿಬಿ ಮತ್ತು ಕೆಯುಐಡಿಎಫ್‌ಸಿ ವತಿಯಿಂದ ವಿನಿಯೋಗಿಸಿರುವ ಮೊತ್ತ ಮತ್ತು ಸಹಾಯಧನ ಇತ್ಯಾದಿ ಬಗ್ಗೆ ಸಹಮತಿ ಪಡೆದು ಉದ್ದೇಶಿತ ಜಮೀನನ್ನು ಹಸ್ತಾಂತರಿಸಲು ನಿರ್ಣಯವಾಗಿರುತ್ತದೆ. ನಿರ್ಣಯ ಅನುಸರಿಸಿ ಈ ಕಛೇರಿಯಿಂದ ಪತ್ರ ಸಂಖ್ಯೆ.ನಸತು/ಭೂಸ್ವಾ/ಸಿಆರ್/01/2005-06 ದಿನಾಂಕ:20-01-2006 ರಂತೆ ಸೂಕ್ತ ನಿರ್ದೇಶನ ಕೋರಿ ಮಾನ್ಯ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು ರವರಿಗೆ ನಿರ್ದೇಶನ ಕೋರಿ ಪತ್ರ ಸಹ ಬರೆಯಲಾಗಿರುತ್ತೆ. ತದನಂತರ

ಕೇಂದ್ರೀಯ ವಿದ್ಯಾಲಯ ನಿರ್ಮಾಣಕ್ಕಾಗಿ ಹಣ ಬಿಡುಗಡೆಯಾಗಿದ್ದು ಮಾರ್ಚ್ 2006ರ ಒಳಗಾಗಿ ಕಟ್ಟಡ ನಿರ್ಮಿಸಲು ಜಮೀನನ್ನು ತುರ್ತಾಗಿ ಹಸ್ತಾಂತರಿಸುವ ಬಗ್ಗೆ ಈ ಸರ್ವೆ ನಂಬರಿನ ಜಮೀನನ್ನು ಅಭಿವೃದ್ಧಿಪಡಿಸಲು ವೆಚ್ಚ ಮಾಡಿದ ರೂ. 27.80 ಲಕ್ಷಗಳ ಸಾಲವನ್ನು ಸಹಾಯಧನ ಅಥವಾ ಮನ್ನಾ ಮಾಡುವ ಆದೇಶವನ್ನು ಸರ್ಕಾರದಿಂದ ನಿರೀಕ್ಷಿಸಿ ಅಮಲಾಪುರ ಸರ್ವೆ ನಂಬರ್ 31 ರಲ್ಲಿನ 10-00 ಎಕರೆ ಜಮೀನನ್ನು ಕೇಂದ್ರೀಯ ವಿದ್ಯಾಲಯಕ್ಕೆ ಸಾರ್ವಜನಿಕ ಹಿತದೃಷ್ಟಿಯಿಂದ ಹಸ್ತಾಂತರಿಸಲು ಸೂಚಿಸಿ ಪತ್ರ ಸಂಖ್ಯೆ:ಎಲ್.ಎನ್.ಡಿ./ ಸಿಎಂಕೆ/ಸಿಆರ್ 153(2) 93-94 ದಿನಾಂಕ9-3-2006 ರಂತೆ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು ರವರಿಂದ ಪತ್ರ ಬಂದಿರುತ್ತೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಅಮಲಾಪುರ ಗ್ರಾಮ ಸರ್ವೆ ನಂಬರ್ 31 ರಲ್ಲಿಯ 10-00 ಎಕರೆ ಜಮೀನನ್ನು ಪ್ರಾಂಶುಪಾಲರು, ಕೇಂದ್ರೀಯ ವಿದ್ಯಾಲಯ, ತುಮಕೂರು ಇವರಿಗೆ ಈ ದಿನ ದಿನಾಂಕ 24-3-2006 ರಂದು ದಿನಾಂಕ:09-03-2006ರ ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿ ಪತ್ರದಂತೆ ಹಸ್ತಾಂತರಿಸಿದೆ.

(signature)

**ಪೌರಾಯುಕ್ತರು**
**ನಗರಸಭೆ, ತುಮಕೂರು.**

ಮೇಲ್ಕಂಡ ಅಮಲಾಪುರ ಗ್ರಾಮ ಸರ್ವೆ ನಂಬರ್ 31 ರಲ್ಲಿಯ 10-00 ಎಕರೆ ಜಮೀನು ಚಕ್ಕುಬಂದಿ : **ಪೂರ್ವಕ್ಕೆ** :- ರಸ್ತೆ, **ಪಶ್ಚಿಮಕ್ಕೆ** :- ಸರ್ವೆ ನಂ. 31ರ ಉಳಿಕೆ ಪ್ರದೇಶ, **ಉತ್ತರಕ್ಕೆ** :- ಸರ್ವೆ ನಂ. 31ರ ಉಳಿಕೆ ಪ್ರದೇಶ, **ದಕ್ಷಿಣಕ್ಕೆ** :- ಸರ್ವೆ ನಂ. 31ರ ಉಳಿಕೆ ಪ್ರದೇಶ ವುಳ್ಳದ್ದನ್ನು ಕೇಂದ್ರೀಯ ವಿದ್ಯಾಲಯ, ತುಮಕೂರು ಸಂಸ್ಥೆಯ ಪರವಾಗಿ ಶ್ರೀ ಬಿ.ಎಸ್.ರಾಮಚಂದ್ರರಾವ್ ಪ್ರಾಚಾರ್ಯರು ಆದ ನಾನು ಮೇಲ್ಕಂಡ ಷರತ್ತಿಗೆ ಒಪ್ಪಿ ಸ್ವಾಧೀನಕ್ಕೆ ಪಡೆದಿರುತ್ತೇನೆ.

B. S. Ramachandra Rao 24.3.06

**ಬಿ.ಎಸ್.ರಾಮಚಂದ್ರರಾವ್**
**ಪ್ರಾಚಾರ್ಯರು,**
**ಕೇಂದ್ರೀಯ ವಿದ್ಯಾಲಯ, ತುಮಕೂರು.**

TRANSLATED COPY

PROCEEDING BEFORE DEPUTY COMMISSIONER TUMKUR DISTRICT, TUMKUR

**SUB:** To grant the land in favour of Kendriaya Vidyalaya, Tumkur by cancelling the grant which was granted for disposal of solid wastage in land bearing survey no. 31 to the extent of 10 acres of Amalapura village:

**REF:** 1) Order passed by Deputy commissioner Tumkur in LND (TMK) C.R.2/1996-1997 dated:19-11-1996:

2) Letter written by Chief Officer, City Municipal council, Tumkur in no. CMC: 1555/0506 dated 18-11-2005.

3) Letter written by Sri. Mallikarjunaiah, Member of Parliament dated 28-9-2005:

PRINCIPAL
प्राचार्य
केन्द्रीय विद्यालय KENDRIYA VIDYALAYA
AMALAPURA, ARAKERE POST,
TUMAKURU - 572 106.

Preamble:

Government land bearing survey no. 31 to the extent of 10 acre of Amalpura village was granted to City Municipal council for the disposal of solid wastage as mentioned above in REF: (1). The City Municipal council by raising loan to the extent of 27.80 lakh from Karnataka urban infrastructure Development finance corporation and Asian Development Bank has improved the area and completed the work during the year 1999 for disposal of solid wastage,

When the City Municipal Council started to store the solid wastage collected from city at that time Arakere Gramapanchyathi and Villagers of Amalapura strongly opposed the same, hence it was not possible to use the said place to store the solid wastage till now and for the last five years several times under the

GOVERNMENT OF KARNATAKA NOTARY
Expires on 10-10-2021

NOTARY

leader ship (2) of Deputy Commissioner, several meetings were held at Gramapanchyath level to convince the public but it was not successful which is mentioned in aforesaid reference letter of commissioner.

Hence the City Municipal council identified 45 acres of land at Ajjagondanahalli Survey number and to establish for storage & treatment plant of solid wastage suitable action was taken. The officials of Pollution board and officials of other department visited the spot expressed their opinion that it is the suitable place for disposal of solid wastage. Hence on the requisition, action was taken to acquire the lands at Ajjagondanahalli village as per land Acquisition act,

For the afore said reasons the Chief Officer, city municipal council have written letter that the land bearing survey number 31 to the extent of 10 acres of Amalapura village which is granted to City Municipal council as referred above in ref. no.1 have no objections to regnant the same in favour of Kendriya Vidyalaya as per their letter referred above in ref: No.2,

प्राचार्य
केन्द्रीय विद्यालय
PRINCIPAL
KENDRIYA VIDYALAYA
AMALAPURA, ARAKERE POST,
TUMAKURU - 572 106.

Principal, Kendriya Vidyalaya Tumakuru has requested to grant land to an extent of 25 acres in survey no. 31 of Amalapura village as the same is suitable place to start Kendriya Vidyalaya in order to put up well equipped school building, staff quarters, sports Hostel and play ground. Member of Parliament Tumakuru has written a letter on 28-9-2005 & 14-10-2005 requesting to grant 25 acres of land in survey no. 31 of Amalapura village to Kendriya Vidyalaya, hence the following order:

GOVERNMENT OF KARNATAKA NOTARY
N. BASAVARAJU
NOTARY No.: ... 2016
TUMAKURU CITY

NOTARY
24-4-2021

ORDER NO. L. N.D: C.M.K: C.R: 153(1)/93-94 D:14/12/2005

Acting under section 72 (2) of Karnataka Municipality act and as per Govt. order no. ನಅಇ:129 ಟಿ.ಎಂ.ಡಿ: 2002 Bengaluru dated 01-06-2003, notification no. UDD: 114:TMS 2003 Bengaluru dated 15-10-2003 and exercising the powers Deputy commissioner land bearing survey no. 31 to the extent of 10 acres of Amalapura village granted to City Municipal Council in order no. LND: (TMK) C.R: 2/196-97 dated 19-11-1996 is ordered to be transferred and granted to Principal, Kendriya Vidyalaya, and Tumkur with following conditions. The boundary for granted land is as follows: East: Road, West: remaining land in sy. no. 31, North: remaining land in sy. no.31, South: remaining land in sy. no. 31. Further commissioner, City Municipal council Tumkur is here by directed to hand over the possession of land to Kendriya vidyalaya Tumkur.

Conditions:

1. The land is granted to Kendriya vidyalaya Tumkur to construct well equipped School building and employees residential quarters, Sports academy, and play ground,
2. Land granted shall be used for the purpose for which it is granted,
3. School building shall be constructed within two years,
4. Granted land shall not be alienated and shall not be used for any other purpose,
5. If any of the above conditions is violated, the Deputy Commissioner Tumakuru is at liberty to cancel the grant.

PRINCIPAL
प्राचार्य
केन्द्रीय विद्यालय
KENDRIYA VIDYALAYA
AMALAPURA, ARAKERE POST,
TUMAKURU - 572 106.

Sd-
Deputy Commissioner
Tumakuru District
Tumakuru

GOVERNMENT OF KARNATAKA * NOTARY *
K. BASAVARAJU
NOTARY No.:
TUMKUR CITY
Expires on 16-10-2021

NOTARY 24-4-2021

Copy To:

1. Director of Municipal Administration, Bengaluru for information
2. Assistant Commissioner, Tumakuru sub-division, Tumakuru for information
3. Sri S. Mallikarjunaiah Member of Parliament, Tumakuru for information
4. Sri. S. Shivanna Member of Legislative Assembly, Tumakuru for information
5. Tahasildar, Tumakuru Taluk Tumakuru for need full action
6. Chief officer, City Municipal Council, Tumakuru for information
5. Principal, Kendriaya Vidyalay, Tumakuru

Sd-
Deputy Commissioner
Tumakuru District
Tumakuru

GOVERNMENT OF KARNATAKA ★ NOTARY ★
N. BASAVARAJU
NOTARY No.:
Law 302 LCL 2016
TUMKUR CITY
Expires on
16-10-2021

Translated by me
N. Basavaraj,
Advocate & Notary,
Gandhi Nagar. TUMKUR - 572 102
24-4-2021

प्राचार्य
केंन्द्रीय विद्यालय
अमलापुर, अरकेरे,
तुमकूरु-५७२ १०६.

PRINCIPAL
KENDRIYA VIDYALAYA
AMALAPURA, ARAKERE POST,
TUMAKURU - 572 106.

NOTARY

TRANSLATED COPY

CITY MUNICIPAL COUNCIL-TUMAKURU

CMC/Acquisition/CR/01:1/2005-2006

Dated: 24-3-2006

**POSSESSION LETTER**

Hon'ble Deputy Commissioner Tumakuru District, Tumakuru has passed order cancelling the grant made in favour of City Municipal council for disposal of solid wastage in survey no.31 to the extent of 10 acres of Amalapura village, Kasaba Hobli, Tumakuru and granted the same in favour of Kendriya Vidyalaya as per order dated 14-12-2005 in no. L & D/CMK/CR: 153(1)/93-94.

As per the aforesaid order, the council in its emergency meeting which was held on 4-1-2006 resolved, till the possession of newly selected place i.e. Ajjagondanahalli survey number is handed over for disposal of solid wastage and further for the improvement of disposal of solid wastage at Amalapura in survey no. 31 ADB and KUIDFC have already invested amount and grant amount etc, and by obtaining permission possession will be handed over. Based on the decision letter was written by this office in no. CMC/LA/CR/01/2005-2006 dated 20-1-2006 to Deputy Commissioner Tumakuru seeking direction.

For construction of Kendriaya vidyalaya amount is released to enable the construction to be completed within March 2006 and in order to hand over the possession urgently anticipating the orders from Government a letter was written to this office by Deputy commissioner Tumakuru District, Tumakuru dated 9-3-2006 in no. LND/CMK/CR 153(2) 93-94 with a direction in the interest of public to hand over the possession of land in survey no. 31 to the extent of 10 acres of

GOVT. OF KARNATAKA * NOTARY *
N. BASAVARAJU

NOTARY

PRINCIPAL
प्राचार्य
केन्द्रीय विद्यालय KENDRIYA VIDYALAYA
अमलापुर, अरकेरे, AMALAPURA, ARAKERE POST.
तुमकुरु-५७२ १०६. TUMAKURU - 572 106.

Amalapura, With the background of above as per letter dated *9-3-2006 by* Deputy Commissioner Tumakuru, this day i.e. on 24-3-2006 possession of *land* bearing survey no. 31 to the extent of 10 acres of Amalapura village *is handed* over to Principal, Kendriaya Vidyalaya, and Tumakuru.

Chief Officer
City Municipal council

I B.N Ramachandra Rao, Principal Kendriaya Vidyalaya Tumakuru by accepting the above conditions have taken the possession of land bearing survey no. 31 to the extent of 10 acres of Amalapura village bounded as follows: East: Road, West: remaining land in sy. no. 31, North: remaining land in sy. no. 31, South: remaining land in sy. no. 31,

Sd-
B.N. Ramachandra rao
Principal
Kendriya Vidyalaya, Tumakuru

GOVERNMENT OF KARNATAKA ★ NOTARY ★
N. BASAVARAJU
NOTARY No.:
Law 204 LCL 2016
TUMKUR CITY
Expires on
16-10-2021

Translated by me

N Basavaraj
22-6-2021
N. Basavaraj.
Advocate & Notary,
Gandhi Nagar. TUMKUR - 572 102

PRINCIPAL
KENDRIYA VIDYALAYA
AMALAPURA, ARAKERE POST,
TUMAKURU - 572 106.
प्राचार्य
केंन्द्रीय विद्यालय
अमलापुर, अरकेरे,
तुमकूरु-५७२ १०६.